3. ಕ್ಲಿಪ್ತ ಕಾಲದವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಕೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ಅವ್ವಲ್ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಘಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ಬೆರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಪಿ. ವೆಂಕಟರಾವ್,
ಫಾರ್ ಆ|| ಜೆಪ್ಯುಟಿ ಕಮ್ಮಿಷನರ್.

ಮೈಸೂರ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 1ನೇ ಜೂನ್ ಸ|| 1896ನೇ ಇಸವಿ.

ಸ|| 1896ನೇ ಇಸವಿ ಜುಲ್ಯೈ 1ರ ಲಾಗಾಯತು ಸ|| 1897ನೇ ಇಸವಿ ಜೂನ್ 30ರ ವರಿಗೆ, ಆ ಎರಡು ದಿವಸಗಳೂ ಸೇರಿ, ಮೈಸೂರು ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವುದಕ್ಕಾಗಿ ದರಖಾಸ್ತುಗಳನ್ನು ಕವರಿನಲ್ಲಿ ಹಾಕಿ ಮೊಹರು ಮಾಡಿ ಕೊಡತಕ್ಕದ್ದೆಂತಲೂ, ಸ|| 1896ನೇ ಇಸವಿ ಜೂನ್ 22ನೇ ಸೋಮವಾರ ಹಗಲು 10 ಘಂಟೆಯವರಿಗೆ ಮೈಸೂರು ಜೈಲ್ ಸೂಪರ್‌ಟೆಂಡೆಂಟರು ಅಂಥಾ ದರಖಾಸ್ತುಗಳನ್ನು ತೆಗದುಕೊಳ್ಳುವರೆಂತಲೂ ಇದರಿಂದ ಘಾಯಿಷ್ ಮಾಡಿಸಿ.

2. ಮೇಲೆಕಂಡ ತಾರೀಖಾದ ತರುವಾಯ ಯಾವ ದರಖಾಸ್ತುಗಳನ್ನೂ ಹಿಡಿಯುವದಿಲ್ಲ.

3. ದರಖಾಸ್ತಿನ ಕವರಿನ ಮೇಲ್‌ಭಾಗದಲ್ಲಿ ಬರೆದಿರಬೇಕಾದ ವೇಲ್ಲಿಳಾಸವೇನೆಂದರೆ,

"I. ಧಾನ್ಯದ ಸರಬರಾಯಿ ದರಖಾಸ್ತು"
"II. ಕಾರದ ಸಾಮಾನು ಸರಬರಾಯಿ ದರಖಾಸ್ತು"
"III. ಇತರ ಬೇಕಾದ ಸಾಮಾನುಗಳ ಸರಬರಾಯಿ ದರಖಾಸ್ತು"
"IV. ಕುರೀ ಮಾಂಸದ ಸರಬರಾಯಿ ದರಖಾಸ್ತು"

4. ಧಾನ್ಯದ ಸರಬರಾಯಿಗೆ 200 ರೂಪಾಯಿ, ಕಾರದ ಸಾಮಾನಿನ ಸರಬರಾಯಿಗೆ 100 ರೂಪಾಯಿ, ಇತರ ಬೇಕಾದ ಸಾಮಾನುಗಳ ಸರಬರಾಯಿಗೆ 100 ರೂಪಾಯಿ, ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಸರಕಾರೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವುದಿಲ್ಲ.

5. ಮೈಸೂರು ಜೈಲ್ ಸೂಪರ್‌ಟೆಂಡೆಂಟರವರು ಮೇಲೆ ನಮೂದಾದ ತಾರೀಖು ಮತ್ತು ಹೊತ್ತಿನಲ್ಲಿ ಹಾಜರಾಗುವದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫಿಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಹಿಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾಧೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರಪು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಇರತಕ್ಕದ್ದು.

ಸಂವತ್ಸರಕ್ಕೆ ಬೇಕಾದ ಪದಾರ್ಥಗಳ ಪಟ್ಟಿ.

ಬೇಕಾಗುವ ಪದಾರ್ಥದ ಪರಿಮಾಣ.

ನಂಬರ್ I ಧಾನ್ಯ.	ಅಕ್ಕಿ	24,550	ಪೌಂಡುಗಳು,
	ರಾಗಿ	95,000	,,
	ತೊಗರಿಬ್ಯಾಳೆ	13,000	,,
	ಅವರೇಬ್ಯಾಳೆ	10,000	,,
ನಂಬರ್ II ಕಾರದ ಸಾಮಾನು.	ಮೆಣಸಿನಪುಡಿ	1,800	,,
	ಈರುಳ್ಳಿ	2,400	,,
	ಬೆಳ್ಳುಳ್ಳಿ	300	,,
	ಹುಣಸೇಹಣ್ಣು	2,400	,,
	ಉಪ್ಪು	3,500	,,
ನಂಬರ್ III ಇತರ ಬೇಕಾದ ಸಾಮಾನು.	ಬೊಸರು	10,400	,,
	ಬೆಳ್ಳೆಣ್ಣೆ	1,150	,,
	ತುಪ್ಪ	600	,,
	ತರಕಾರಿ	28,500	,,
	ಸವುದೆ	136,960	,,
	ಹಾಲು	800	,,
	ಸಕ್ಕರೆ	50	,,
	ಸೋಜಿ	30	,,
	ರೊಟ್ಟಿ	20	,,
ನಂಬರ್ IV ಕುರೀ ಮಾಂಸ.	ಕುರೀ ಮೊಂಸ	7,400	,,

ಪದಾರ್ಥಗಳು ಮೇಲೆಕಂಡ ಪರಿಮಾಣದ ಮೇಲೆ ಇಪ್ಪತ್ತೈದ್ಕೇ ಆಗಬೇಕೆಂದು ಖಾತರಿ ಯಾವದೂ ದೊರೆಯುವದಿಲ್ಲ.

7. ಖೈದಿಗಳು ಬೀಸುವದಕ್ಕೆ ರಾಗಿಯನ್ನು ಕಂಟ್ರಾಕ್ಟರ್ ಸರಬರಾಯಿ ಮಾಡತಕ್ಕದ್ದು. ಅದನ್ನು ಹಸೀಹಿಟ್ಟುಗಿಯೇ ಕೊಡತಕ್ಕದ್ದು.

ಸರಬರಾಯಿ ಮಾಡಲ್ಪಡುವ ಹಸೀಹಿಟ್ಟಿನ ಪರಿಮಾಣವನ್ನು ನೋಡಿಕೊಂಡು ರಾಗೀ ದರದಂತೆಯೇ ಹಣ ಕೊಡಲ್ಪಡುವುದು.

8. ಕಮ್ಮಿ ದರಖಾಸ್ತನ್ನಾಗಲಿ ಅಥವ ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿಕೊಳ್ಳುವ ಭಾಗದಲ್ಲಿ ಸೂಪರ್ಟಿರ್ಡೆಂಟರವರು ಬದ್ಧರಾಗಿರುವುದಿಲ್ಲ. ಇವರು ಯಾವ ಕಾರಣವನ್ನೂ ಹೇಳದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸಬಹುದು.

9. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಜೀವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು, ಮತ್ತು ಅವರ ದರಖಾಸ್ತು ಮಂಜೂರಾಗಿದೆಯೆಂದು ಅವರಿಗೆ ತಿಳಿಯು ಪಡಿಸಿದ ಬಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವ ಧಾನ್ಯಕ್ಕೆ 200 ರೂಪಾಯಿ, ಕಾರದ ಸಾಮಾನಿಗೆ 100 ರೂಪಾಯಿ, ಇತರ ಅವಶ್ಯಕವಾದ ಪದಾರ್ಥಗಳಿಗೆ 100 ರೂಪಾಯಿ, ಕುರೀ ಮಾಂಸಕ್ಕೆ 75 ರೂಪಾಯಿ, ಈ ಮೇರೆ ನಗದಾಗಿಯಾಗಲಿ, ಸರಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ, ಮೇಲೆ ಕಂಡ ಜೀವಣೀ ಮೊಬಲಗು ಸಿವಾಯಿ ಜಮೆಯಾಗಿ ತೆಗೆದು ಕೊಳ್ಳಲ್ಪಡುವದು.

10. ಕಂಟ್ರಾಕ್ಟರ್ ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಸೂಪರ್ಟಿರ್ಡೆಂಟರವರು ಪ್ರತಿ ತಿಂಗಳ ಗುರ್ತೇ ತಾರೀಖಿನ ತರುವಾಯ ಪಾವತಿ ಮಾಡುವರು.

11. ಸ್ಟೋರ್ ರೂಂಸ್ ಎಂಬ ಉಗ್ರಾಣವು ಇಜಾರೆದಾರರ ವಶಕ್ಕೆ ಬಿಟ್ಟು ಕೊಡಲ್ಪಡುವುದು. ಅವರು ಅದರಲ್ಲಿ ನಾಶವಾಗದೆ ಇರತಕ್ಕ ಪದಾರ್ಥಗಳನ್ನ ಇಟ್ಟುಕೊಳ್ಳಬಹುದು. ಯಾವಾಗ್ಯೂ ಉಗ್ರಾಣದಲ್ಲಿ ಒಂದು ತಿಂಗಳ ಸಾಮಾನಿಗೆ ಕಡಮೆ ಇಲ್ಲದಂತೆ ತುಂಬಿಕೊಂಡಿರಬೇಕು. ನಾಶವಾಗತಕ್ಕ ಪದಾರ್ಥಗಳು ಎಂದರೆ ತರಕಾರಿ ವಗೈರೆ ಪದಾರ್ಥಗಳು ಪ್ರತಿ ದಿನವೂ ಬೆಳಗಿನ 7 ಘಂಟೆಗೆ ಜೈಲ್ಖಾನೆಯಲ್ಲಿರಬೇಕು.

12. ಈ ಕಂಟ್ರಾಕ್ಟನ್ನು ಪಿಕಮಿ ಇಜಾರೆಯಾಗಿ ಕೊಡಲ್ಪಡಕೂಡದು.

13. ಕಂಟ್ರಾಕ್ಟು ಪರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಜೈಲ್ ಸೂಪರ್ಟಿರ್ಡೆಂಟರವರು ಮುನಾಸಬ್ ಅರಿತು 50 ರೂಪಾಯಿಗೆ ಹೆಚ್ಚದೆ ಜರಿಮಾನೆಯನ್ನು ವಸೂಲ್ ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ದೆಗೆದು ಕೊಳ್ಳಬಹುದು.

14. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂದರ್ಭಗಳೆಲ್ಲೆಲ್ಲಾ ಸದರಿ ಸೂಪರ್ಟಿರ್ಡೆಂಟರವರ ಫೈಸಲೇ ಆಖೈರ್ ಫೈಸಲಾಗಿರತಕ್ಕದ್ದು.

15. ಖೈದಿಗಳ ಉಪಯೋಗಕ್ಕೆಂತಲೆ ಅವಶ್ಯವಾದ ತರಕಾರಿಯನ್ನಾಗಲಿ, ಹಾಲನ್ನಾಗಲಿ ಮತ್ತು ಇತರ ತೋಟದ ಫಸಲನ್ನಾಗಲಿ ಕಂಟ್ರಾಕ್ಟು ದರದಂತೆಯೇ ಜೈಲಿನಿಂದ ಖರೀದಿಗೆ ತೆಗೆದು ಕೊಳ್ಳಲು ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು.

16. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್ಟಿರ್ಡೆಂಟರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

17. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್ಸ್ಪೆಕ್ಟರ್ ಜನರಲ್ರವರ ಮಂಜೂರಾತಿಗೆ ಬಳಪಟ್ಟು ಇರುವವು. ಇವರು ಎಲ್ಲಾ ದರಖಾಸ್ತುಗಳನ್ನೇ ಆಗಲಿ ಅಥವಾ ಯಾವ ಒಂದು ದರಖಾಸ್ತನ್ನೇ ಆಗಲಿ ತಿರಸ್ಕರಿಸತಕ್ಕ ಹಕ್ಕನ್ನು ಉಳಸಿ ಕೊಂಡಿರುವರು.

18. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಕೊನೇ ಪಕ್ಷ ಒಂದು ತಿಂಗಳಿಗೆ ಮುಂಚಿತವಾಗಿಯಾದರೂ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

19. ಇಜಾರೆದಾರರು ತಪ್ಪಿ ಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನು ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತೀ ಮಾಡಿಕೊಡಬೇಕು.

ವಿಚಾರ—ಮೇಲೆ ನಮೂದಾದ ಕಂಟ್ರಾಕುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯತಿಯೂ ದೊರೆಯಲಾರದು.

ಯಾವ ಒಬ್ಬನೇ ಒಬ್ಬ ಕಂಟ್ರಾಕ್ಟುದಾರನಾದರೂ ಸರಿಯೇ ಒಟ್ಟು ಇಜಾರೆಗೆ ಜಾಮೀನ್ ತರೀಕ್ 475 ರೂಪಾಯಿಗಳನ್ನು ಜೀವಣಿ ಕಟ್ಟುವದರ ಮೂಲಕ ಬಂದೇ ದರಖಾಸ್ತಿನಲ್ಲಿ ಎಲ್ಲಾ ಪದಾರ್ಥಗಳಿಗೂ ದರಖಾಸ್ತ್ ಕೊಡಬಹುದು.

ಟಿ. ವಿ. ಆರ್ಮುಗಂ,
ಮೈಸೂರ್ ಜೈಲ್ ಸೂಪರ್ಟಿಂಡೆಂಟ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ,—ಸ 1896—97ನೇ ಸಾಲಿಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಬರುವ ಜುಲೈ 14ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.